ನಿಶಾಚರಿಗಳು, ‘ಆಪರೇಷನ್ ಕಿಂಡಿ’ಗಾಗಿ, ಮನೆಯಲ್ಲಿ ಜನರಿಲ್ಲದ ಸಮಯ ನೋಡಿಕೊಂಡು ಆಯುಧಗಳ ಮೂಲಕ ರಂಗಕ್ಕಿಳಿಯುತ್ತಿದ್ದರು. ಆಧುನಿಕ ಯುಗದಲ್ಲಿ ಸೈಬರ್ ಕಳ್ಳತನಗಳು ಹೆಚ್ಚಾಗಿ, ಅಧಿಕ ಸಮಯ, ಅಪಾರ ಶ್ರಮ ಬೇಡುವ ಹಾಗೂ ಅಪಾಯಕ್ಕೆ ಸಿಲುಕಿಸುವ ಕನ್ನ ಕೊರೆಯುವ ದೀರ್ಘ ಪ್ರಕ್ರಿಯೆಯಿಂದ ನಿವೃತ್ತಿ ಹೊಂದುತ್ತಿರುವವರು ಹೆಚ್ಚಾಗುತ್ತಿದ್ದಾರೆ. ಜಾಲತಾಣಗಳಲ್ಲಿ ಹೆಚ್ಚು ಸಕ್ರಿಯರಾಗಿ, ಬೆಲ್ಲ ಜಜ್ಜಿದ ಕಲ್ಲಿನ ಹಾಗೆ ಕೂತಲ್ಲೇ ಕೂತು, ಮೊಬೈಲ್ ಸ್ಕ್ರೀನ್ ಮೇಲೆ ಫಿಂಗರ್‌ಟಿಪ್ಸ್ ಮೂಲಕವೇ ಬಗೆಬಗೆಯ ಕೊಂಡಿ (ಲಿಂಕ್)ಗಳನ್ನು ಅಭಿವೃದ್ಧಿಪಡಿಸುವರು. ನಂತರ ಅವುಗಳನ್ನು ಕೊರೊನಾ ವೈರಸ್‌ಗಳನ್ನು ಹಂಚಿದಂತೆ, ಮೆಸೆಂಜರ್ ಎನ್ನುವ ಹಿತ್ತಲಗಿಂಡಿಯ ಮೂಲಕವೋ, ವಾಟ್ಸಾಪ್ ಎನ್ನುವ ಖಾಸಗಿ ಕಿಂಡಿಯ ಮೂಲಕವೋ, ಒಟ್ಟಿನಲ್ಲಿ ವಿವಿಧ ಜಾಲತಾಣಗಳ ಮೂಲಕ ಗಾಳ ಹಾಕಿ, ಕ್ಲಿಕ್ಕಿಸುವ ಜಾಲ ಬೀಸಿ, ಕ್ವಿಕ್ ಆಗಿ ಹಣ ಲಪಟಾಯಿಸುವ ಚೋರರು ಹೆಚ್ಚುತ್ತಿರುವರು.

ಇಲಿ, ಹೆಗ್ಗಣಗಳು ಮಾತ್ರ ಕಿಂಡಿ ಕೊರೆಯುವ ತಮ್ಮ ವಂಶಪಾರಂಪರ್ಯ ಕಸುಬನ್ನು ಸಮರ್ಥವಾಗಿ ಮುಂದುವರೆಸುತ್ತಿವೆ. ಕಿಂಡಿ ಕಾರ್ಯದಲ್ಲಿ ಅತಿ ಹೆಚ್ಚು ಮುನ್ನಡೆ ಸಾಧಿಸುತ್ತಿರುವುದು ದರ್ಜಿಗಳು ಎನ್ನಬಹುದು. ಮಹಿಳೆಯರ ಉಡುಪುಗಳಿಗೆ ಎಲ್ಲೆಲ್ಲಿ, ಎಷ್ಟೆಷ್ಟು ಅಳತೆಯ ಕಿಂಡಿ ಕೊರೆದರೆ ಆಕರ್ಷಕವಾಗಬಹುದು ಎಂದು ನ್ಯೂಟನ್, ಐನ್‌ಸ್ಟೀನ್‌ಗಳಿಗಿಂತ ಹೆಚ್ಚು ಆವಿಷ್ಕಾರ ಮಾಡುವುದರಲ್ಲಿ ಮಗ್ನರಾಗಿರುವರು. ಉಡುಪಿನ ಹಿಂಭಾಗದ ಬಯಲುಪ್ರದೇಶದಲ್ಲಿ ಮೊದಲು ಬೆನ್ನಗಿಂಡಿ ಕಾರ್ಯ ಕೈಗೆತ್ತಿಕೊಂಡು ಯಶಸ್ವಿಯಾದರೆನ್ನಬಹುದು. ನಂತರ ಕೋಲ್ಡ್ ಶೋಲ್ಡರ್ಸ್ ಎನ್ನುವ ಹೆಸರಿನಲ್ಲಿ, ಹಾಟ್ ಲುಕ್ ಕೊಡುವ ಭುಜಗಿಂಡಿ, ತೋಳ್ಗಿಂಡಿ, ಎಲ್ಬೋಗಿಂಡಿಗಳು ತುಂಬ ಪ್ರಸಿದ್ಧಿ ಪಡೆಯುತ್ತಿವೆ. ಬಟ್ಟೆಯಲ್ಲಿ ಕಿಂಡಿ ಕೊರೆದು, ಕಿಂಡಿಯಂಚನ್ನು ಅಲಂಕರಿಸುವುದು, ಕಿಂಡಿಗಳಿಗೆ ಮೆಶ್ ರೀತಿಯಲ್ಲಿ ನೆಟ್‌ಬಟ್ಟೆ ಕವರ್ ಮಾಡುವುದು ಇವೇ ಮುಂತಾದ ಕಿಂಡಿ ಡಿಸೈನ್‌ಗಳು ಹೆಂಗಳೆಯರ ಮನಸೂರೆಗೊಳ್ಳುತ್ತಿವೆ. ಈಗ ಉತ್ಪಾದನೆಯ ಹಂತದಲ್ಲೇ ಮೈತುಂಬ ಪುಟ್ಟ ಪುಟ್ಟ ಕಿಂಡಿಗಳುಳ್ಳ ಬಟ್ಟೆಗಳು ದಾಂಗುಡಿಯಿಡುತ್ತಿವೆ. ಉಡುಪುಗಳ ಮೇಲ್ಭಾಗದಲ್ಲಿ ಕೊರೆಯುವ ಕಿಂಡಿಗಳು ವಾಸ್ತುಶಿಲ್ಪಿಗಳು ತುಂಬ ಯೋಚಿಸಿ, ಯೋಜಿಸಿ ಕರಾರುವಕ್ಕಾಗಿ ಕೊರೆದಂತಿದ್ದರೆ, ಪ್ಯಾಂಟುಗಳು ಮಾತ್ರ ಮೂಷಿಕ ಅಥವಾ ಶ್ವಾನಗಳ ಆಕ್ರೋಶಕ್ಕೆ ತುತ್ತಾಗಿ ಎರ್ರಾಬಿರ್ರಿ ಹರಿದಂತೆ ಕಂಡುಬರುತ್ತವೆ.

ಗಂಡು ಮಕ್ಕಳು ಕಿಂಡಿ ಬಟ್ಟೆಯನ್ನು ಅಷ್ಟಾಗಿ ಇಷ್ಟಪಡಲಾರರು. ಕೆಲ ಸಿನಿಮಾ ನಟರು ಸಣ್ಣ ಕಿಂಡಿಗಳುಳ್ಳ ಬಲೆ ಬಟ್ಟೆಗಳನ್ನು ಧರಿಸಿ ‘ಭಲೆ’ ಎನಿಸಿಕೊಂಡಿರಬಹುದು. ಮತ್ತೆ ಕೆಲವರ ಉದರ ಭಾಗ ಯಾವುದೇ ಅಂಕೆಗೊಳಪಡದೆ ಸದರವಾಗಿ ವಿಸ್ತರಿಸಿದಾಗ, ಅಂಗಿ ಗುಂಡಿಗಳ ನಡುವೆ ‘ಆವರಣ ಚಿಹ್ನೆ’ಯಂತಹ ಕಿಂಡಿಗಳು ತಾನಾಗಿಯೇ ಮೂಡಿ ಒಳಾವರಣದ ಹೂರಣವನ್ನೆಲ್ಲ ಬಯಲು ಮಾಡುವವು ಎನ್ನುವುದನ್ನು ಹೊರತು ಪಡಿಸಿದರೆ ಪುರುಷರದು ಬಹುತೇಕ ಒಳಗಿಂಡಿ ಫ್ಯಾಷನ್. ಹೊರಗಡೆ ಎಂತೆಂತಹ ದುಬಾರಿ ಬೆಲೆಯ ಬ್ರ್ಯಾಂಡೆಡ್ ಉಡುಪು ಧರಿಸಿದರೂ ಸಹ, ಒಳ ಬನಿಯನ್ನು, ನಿಕ್ಕರು, ಸಾಕ್ಸ್‌ಗಳಲ್ಲಿ ಉಂಟಾಗುವ ಇಂತಹ ಕಿಂಡಿಗಳ ಕಡೆ ಬಹುತೇಕರು ಲಕ್ಷ್ಯವೀಯಲಾರರು. ಒಳ ಉಡುಪುಗಳ ಆಯುಷ್ಯರೇಖೆ ಹೆಚ್ಚಾಗುತ್ತಿದ್ದಂತೆ, ಗಗನಚುಕ್ಕಿಗಳಂತೆ ಅಲ್ಲಲ್ಲಿ (ಸರ) ಭರಚುಕ್ಕಿಗಳು ಮೂಡತೊಡಗುತ್ತವೆ. ನಂತರ ಚುಕ್ಕಿಗಳನ್ನು ಸೇರಿಸುವ ಆಟದಂತೆ, ಒಂದಕ್ಕೊಂದು ಸೇರಿಕೊಳ್ಳು ತ್ತಲೇ ವಿವಿಧ ಆಕಾಶಕಾಯಗಳ ಅವತಾರಗಳಾಗಿ ಮಾರ್ಪಡುವುದಿದೆ. ಬಹುತೇಕರು ಬದಲಾಯಿಸುವ ಉತ್ಸಾಹ ತೋರದೆ, ‘ಒಳಗುಟ್ಟನ್ನು ಅರಿಯುವವರಿಲ್ಲ’ ಎನ್ನುವ ಭಂಡ ಧೈರ್ಯದಿಂದಿರುವರು. ಹೊಸ ಶೂಗಳನ್ನು ಕೊಳ್ಳುವಾಗಲೋ, ನೀರಿನಲ್ಲಿ ಮುಳುಗು ಹಾಕುವಾಗಲೋ, ಹೀಗೆ ಆಕಸ್ಮಿಕವಾಗಿ ಕಿಂಡಿಗಳು ಸಾರ್ವಜನಿಕ ಪ್ರದರ್ಶನಕ್ಕೀಡಾದಾಗಲೇ, ಅವುಗಳಿಗೆ ಮುಕ್ತಿಮಾರ್ಗ ದೊರೆಯುವ ಸೂಚನೆ ಕೆಲವರಲ್ಲಿ ಕಾಣಬಹುದು.

ನಾಸಿಕ ಹಾಗೂ ಕಿವಿಗಳಿಗೆ ರಂಧ್ರ ಕೊರೆಯುವ ಕಾರ್ಯವು ಸಾಂಪ್ರದಾಯಿಕವಾಗಿ ನೆರವೇರುವುದು. ನಂತರ ಕೆಲವರು ಇಚ್ಛಾಕಿಂಡಿಗಳನ್ನು ಮೂಗಿನ ಮತ್ತೊಂದು ಬದಿ, ಮಧ್ಯ ತುದಿ, ಕರ್ಣದಂಚುಗಳ ಸುತ್ತ, ಹೀಗೆ ತಮ್ಮ ತಮ್ಮ ಅಲಂಕಾರಕ್ಕೆ ತಕ್ಕಷ್ಟು ಸಂಖ್ಯೆಗಳನ್ನು ಹೆಚ್ಚಿಸಿಕೊಂಡು ಕೊರೆಸಿಕೊಳ್ಳುವರು. ನಂತರ ರಂಧ್ರಗಳ ಮೂಲಕ ತೂಗು ಉದ್ಯಾನದ ರೀತಿಯಲ್ಲಿ ಬಗೆಬಗೆಯ ಆಭರಣಗಳನ್ನು ತೂರಿಸಿಯೋ, ತೂಗು ಹಾಕಿಯೋ, ಆ ರಂಧ್ರಗಳ ಸುತ್ತಳತೆ ಹೆಚ್ಚಿ, ಎರಡೂ ಬದಿಯಿಂದ ಇಣುಕಿ ನೋಡಬಹುದಷ್ಟು ಕಿಂಡಿಯಳತೆಗೆ ಬಂದು ನಿಂತಿರುತ್ತವೆ. ಕೆಲವೊಮ್ಮೆ ಅವುಗಳನ್ನು ಹೊಲಿದು ಕುಗ್ಗಿಸುವ ಪ್ರಯತ್ನವನ್ನೂ ಮಾಡುವರು. ಹಲ್ಲುಗಳಲ್ಲಿ ಕಿಂಡಿ ಕೊರೆಯುವ ಕಾರ್ಯವನ್ನು ಕೀಟಾಣುಗಳು ಸ್ವಇಚ್ಛೆಯಿಂದಲೇ ವಹಿಸಿಕೊಂಡಿವೆ. ಆ ಕಿಂಡಿಗಳನ್ನು ಮುಚ್ಚುವ ಸಾಹಸದಲ್ಲಿ ದಂತಕರ್ಮಿಗಳು, ಅದರ ಸುತ್ತಮುತ್ತ ದಂತ ಅಗಲೀಕರಣ ಕಾಮಗಾರಿ ನಡೆಸಿ, ಶ್ವೇತ ಸಿಮೆಂಟಿನ ಕಾಂಕ್ರೀಟನ್ನು ರಸ್ತೆಗುಂಡಿಯಂತೆ ತುಂಬುವರು. ಆದರೂ ಪಟ್ಟುಬಿಡದ ತ್ರಿವಿಕ್ರಮನ ವಂಶಸ್ಥರಂತೆ ಕೀಟಾಣುಗಳು ಅವಕಾಶ ದೊರೆತಾಗೆಲ್ಲ ಹುಲ್ಲುಗಾವಲು ಪ್ರದೇಶವನ್ನು ಅತಿಕ್ರಮಿಸಿ ಕಿಂಡಿ ಕೊರೆಯಲು ಅನುವಾಗುವವು. ನಾಲಿಗೆಯೆಂಬ ಮೂರಂಗುಲದ ಕೊರೆಯುವ ಯಂತ್ರದ ಮೂಲಕ ಬುರುಡೆ ತೂತಾಗುವಷ್ಟು ಬುರುಡೆ ಬಿಡುವವರಿದ್ದಾರೆ.

ಕಳ್ಳಕೃಷ್ಣ ಎಂದೇ ಪ್ರೀತಿಯಿಂದ ಕರೆಸಿಕೊಳ್ಳುವ ಕೇಶವನು, ತನ್ನ ಭಕ್ತನಾದ ಕನಕನ ಅಭಿಲಾಷೆಯನ್ನು ಪೂರೈಸುವುದಕ್ಕಾಗಿ, ಆಗೇ ಮೋಡ್‌ನಿಂದ ಪೀಚೇ ಮೋಡ್‌ಗೆ ತಿರುಗಿ, ಗೋಡೆಯಲ್ಲಿ ಕಿಂಡಿಯುಂಟಾಗುವಂತೆ ಮಾಡಿ, ದರ್ಶನ ನೀಡಿ, ಅದು ‘ಕನಕನ ಕಿಂಡಿ’ ಎಂದೇ ಪ್ರಸಿದ್ಧಿ ಪಡೆಯಿತು. ಹಾಗಾಗಿ ಶ್ರೀಕೃಷ್ಣನನ್ನು ಪ್ರಥಮ ಕಿಂಡಿಶಿಲ್ಪಿ ಎಂದು ವ್ಯಾಖ್ಯಾನಿಸಬಹುದು. ಕೋಟೆಯ ಕಿಂಡಿಯಿಂದ ಇರುವೆ, ಗೊದ್ದಗಳಂತೆ ನುಗ್ಗಿ ಒಳಬರುತ್ತಿದ್ದ ಶತ್ರುಗಳನ್ನು, ತನ್ನ ಕುಟ್ಟಾಯುಧ ಒನಕೆಯಿಂದಲೇ ಸದೆಬಡಿದು ಹೊಸಕಿ ಹಾಕಿ, ಆ ಮೂಲಕ ಆ ಕಿಂಡಿಗೆ ‘ಓಬವ್ವನ ಕಿಂಡಿ’ ಎಂದು ಲೋಕಮಾನ್ಯತೆ ದೊರಕಿಸಿಕೊಟ್ಟ ಕೀರ್ತಿ ಈ ಲೋಕಮಾತೆಗೇ ಸಲ್ಲುತ್ತದೆ. ‘ಕಿಂಡಿ’ ಹೆಸರಿನ ಅಣೆಕಟ್ಟು ಕೂಡ ಇದೆ. ‘ಭೀಮನಕಿಂಡಿ’ ಎನ್ನುವ ಟ್ರೆಕ್ ಪಾಯಿಂಟ್, ಭೀಮನು ತನ್ನ ಗದೆಯಿಂದ ಈ ಕಮಾನನ್ನು ಅಂದರೆ ಬೃಹತ್‌ಕಿಂಡಿಯನ್ನು ನಿರ್ಮಿಸಿರುವ ಪ್ರತೀತಿ ಇದೆ. ಕಿಂಡಿಕಾರ್ ಎನ್ನುವ ನಾಲ್ಕು ಚಕ್ರದ ವಾಹನಗಳ ರೂಫಿಗೆ ಅಳವಡಿಸಿರುವ ಹೊಸ ಕಾನ್ಸೆಪ್ಟ್ ಇತ್ತೀಚೆಗೆ ಹೆಚ್ಚು ಜನರ ಆಯ್ಕೆಯಾಗಿದೆ. ಡ್ರೈವರ್ ಸೀಟಿನಲ್ಲಿ ಕುಳಿತವರನ್ನು ಹೊರತುಪಡಿಸಿ, ಉಳಿದವರು ಅದರೊಳಗಿನಿಂದ ತಲೆ, ಕೈಗಳನ್ನು ತೂರಿಸಿ ಹೊರಗೆ ಇಣುಕಿ ಹಾಕುತ್ತಲೇ ಪ್ರಯಾಣ ಮಾಡಬಹುದು. ಬಹುಶಃ ವಿದೇಶಗಳ ನೈಸ್ ರಸ್ತೆಗಳಿಗೆ ಇದು ಹೊಂದಬಹುದೇನೋ? ನಮ್ಮ ರಸ್ತೆಗಳಲ್ಲಿ ಇರುವ ಗುಡ್ಡದಂತಹ ಹಂಪುಗಳನ್ನು ಹಾರುತ್ತಿದ್ದಂತೆ, ಕಾರೊಲ್ಲಂಘನ ಮಾಡಿ ರಸ್ತೆಗೆ ಹಾರಿ ಬೀಳುವ ಪರಿಸ್ಥಿತಿ ಒದಗಬಹುದು. ಕಣಿವೆಗಳಂತಹ ಗುಂಡಿಗಳಲ್ಲಿ ಇಳಿಯುತ್ತಿದ್ದಂತೆ, ಅಕ್ಕಪಕ್ಕ ಎಲ್ಲಿಬೇಕಾದರೂ ತಲೆಯು ಗುದ್ದಿಕೊಳ್ಳಬಹುದಾದ್ದರಿಂದ, ಶಿರಸಾ ವರಿಸಿಕೊಳ್ಳುವ ಫಜೀತಿ. ಇದರ ಅನುಭವವನ್ನು ಕಿಂಡಿಕಾರ್‌ಗಳನ್ನು ಕೊಂಡ ಜನರೇ ವಿವರಿಸಬೇಕು!

ಹಣಕಿ ಹಾಕಲು ಬಾಹ್ಯಕಿಂಡಿಗಳು ಹಲವಾರು ಇರಬಹುದು. ಅಂತರಂಗದ ಕಿಂಡಿಯಲ್ಲಿ ಆಗಾಗ ಇಣುಕುವ ಪರಿಪಾಟವನ್ನೂ ಬೆಳೆಸಿಕೊಂಡಾಗ, ಅರಿವಿನ ಕೊಂಡಿ ತಾನಾಗಿಯೇ ಸರಿದು, ಜ್ಞಾನದ ಬೆಳಕು ಹೊಮ್ಮುವುದಕ್ಕೆ ಸಹಕಾರಿಯಾಗಬಹುದು ಅಲ್ಲವೇ?

ಪ್ರತಿಕ್ರಿಯಿಸಿ: **feedback@sudha.co.in**

